# ಭೂಮಿ ಸೂಕ್ತ

(ಅಥರ್ವ ವೇದ, 12ನೇ ಕಾಂಡ, 1ನೇ ಸೂಕ್ತ ಹಾಗೂ
ಯಜುರ್ ವೇದ ತೈತ್ತಿರೀಯ ಸಂಹಿತೆ 1ನೇ ಕಾಂಡ 5ನೇ ಪ್ರಪಾಠಕ 3ನೇ ಅನುವಾಕ)

**12.01.01 :** ಸತ್ಯಂ ಬೃಹತ್ ಋತಮ್ ಉಗ್ರಂ (1) ದೀಕ್ಷಾ ತಪೋ ಬ್ರಹ್ಮ ಯಜ್ಞಃ (2) ಪೃಥಿವೀಂ ಧಾರಯಂತಿ (3)
ಸಾ ನೋ ಭೂತಸ್ಯ ಭವ್ಯಸ್ಯ ಪತ್ನೀ (4) ಉರುಂ ಲೋಕಂ ಪೃಥಿವೀ ನಃ ಕೃಣೋತು (5) (ಛಂದಸ್ಸು : ತ್ರಿಷ್ಟುಪ್)

**12.01.02 :** ಅಸಂಬಾಧಂ ಮಧ್ಯತೋ ಮಾನವಾನಾಂ (1) ಯಸ್ಯಾ ಉದ್ವತಃ ಪ್ರವತಃ ಸಮಂ ಬಹು (2)
ನಾನಾವೀರ್ಯಾ ಓಷಧೀರ್ಯಾ ಬಿಭರ್ತಿ ಪೃಥಿವೀ (3) ನಃ ಪ್ರಥತಾಂ ರಾಧ್ಯತಾಂ ನಃ (4) (ಛಂದಸ್ಸು : ಭೂರಿಕ್)

**12.01.03 :** ಯಸ್ಯಾಂ ಸಮುದ್ರ ಉತ ಸಿಂಧುರಾಪೋ (1) ಯಸ್ಯಾಮ್ ಅನ್ನಂ ಕೃಷ್ಟಯಃ ಸಂಬಭೂವುಃ (2)
ಯಸ್ಯಾಮಿದಂ ಜಿನ್ವತಿ ಪ್ರಾಣದೇಜತ್ (3) ಸಾ ನೋ ಭೂಮಿಃ ಪೂರ್ವಪೇಯೇ ದಧಾತು (4) (ಛಂದಸ್ಸು : ತ್ರಿಷ್ಟುಪ್)

**12.01.04 :** ಯಸ್ಯಾಃ ಚತಸ್ರಃ ಪ್ರದಿಶಃ ಪೃಥಿವ್ಯಾ (1) ಯಸ್ಯಾಮನ್ನಂ ಕೃಷ್ಟಯಃ ಸಂಬಭೂವುಃ (2)
ಯಾ ಬಿಭರ್ತಿ ಬಹುಧಾ ಪ್ರಾಣತ್ ಏಜದ್ (3) ಸಾ ನೋ ಭೂಮಿಃ ಗೋಷು ಅಪ ಅನ್ನೇ ದಧಾತು (4)
(ಛಂದಸ್ಸು : ವ್ಯವಸಾನಾ ಷಟ್ಪದಾ ಜಗತೀ)

**12.01.05 :** ಯಸ್ಯಾಂ ಪೂರ್ವೇ ಪೂರ್ವಜನಾ ವಿಚಕ್ರಿರೇ (1) ಯಸ್ಯಾಂ ದೇವಾ ಅಸುರಾನ್ ಅಭಿ ಅವರ್ತಯನ್ (2)
ಗವಾಮಶ್ವಾನಾಂ ವಯಸಶ್ಚ ವಿಷ್ಠಾ (3) ಭಗಂ ವರ್ಚಃ ಪೃಥಿವೀ ನೋ ದಧಾತು (4) (ಛಂದಸ್ಸು : ತ್ರಿಷ್ಟುಪ್)

**12.01.06 :** ವಿಶ್ವಂಭರಾ ವಸುಧಾನೀ (1) ಪ್ರತಿಷ್ಠಾ ಹಿರಣ್ಯವಕ್ಷಾ ಜಗತೋ ನಿವೇಶನೀ (2)
ವೈಶ್ವಾನರಂ ಬಿಭ್ರತೀ ಭೂಮಿಃ ಅಗ್ನಿಮ್ (3) ಇಂದ್ರಋಷಭಾ ದ್ರವಿಣೇ ನೋ ದಧಾತು (4)
(ಛಂದಸ್ಸು : ವ್ಯವಸಾನಾ ಷಟ್ಪದಾ ಜಗತೀ)

**12.01.07 :** ಯಾಂ ರಕ್ಷಂತಿ ಅಸ್ವಪ್ನಾ ವಿಶ್ವದಾನೀಂ ದೇವಾ ಭೂಮಿಂ ಪೃಥಿವೀಮ್ ಅಪ್ರಮಾದಮ್ (1)
ಸಾ ನೋ ಮಧು ಪ್ರಿಯಂ ದುಹಾಮ್ (2) ಅಥೋ ಉಕ್ಷತು ವರ್ಚಸಾ (3) (ಛಂದಸ್ಸು : ಪ್ರಸಾರಪಂಕ್ತೀಃ)

**12.01.08 :** ಯಾ ಅರ್ಣವೇ ಅಧಿ ಸಲಿಲಮಗ್ರ ಆಸೀತ್ (1) ಯಾಂ ಮಾಯಾಭಿಃ ಅನ್ವಚರನ್ ಮನೀಷಿಣಃ (2)
ಯಸ್ಯಾ ಹೃದಯಂ ಪರಮೇ ವ್ಯೋಮನ್ (3) ಸತ್ಯೇನ ಆವೃತಮಮೃತಂ ಪೃಥಿವ್ಯಾಃ (4) ಸಾ ನೋ ಭೂಮಿಃ ತ್ವಿಷಿಂ ಬಲಂ (5)
ರಾಷ್ಟ್ರೇ ದಧಾತು ಉತ್ತಮೇ (6) (ತ್ರೈವಂ ಶತಮ್ ವಿರಾಡಷ್ಟಿಃ, ಮಂತ್ರ)

**12.01.09 :** ಯಸ್ಯಾಮಾಪಃ ಪರಿಚರಾಃ ಸಮಾನೀಃ (1) ಅಹೋರಾತ್ರೇ ಅಪ್ರಮಾದಂ ಕ್ಷರಂತಿ (2)
ಸಾ ನೋ ಭೂಮಿಃ ಭೂರಿಧಾರ ಪಯೋ ದುಹಾಮ್ (3) ಅಥೋ ಉಕ್ಷತು ವರ್ಚಸಾ (4) (ಛಂದಸ್ಸು : ಪರಾನುಷ್ಟುಪ್)

**12.01.10 :** ಯಾಮ್ ಅಶ್ವಿನೋ ಅಮಿಮಾತಾಂ (1) ವಿಷ್ಣುಃ ಯಸ್ಯಾಂ ವಿಚಕ್ರಮೇ (2) ಇಂದ್ರೋ (3)
ಯಾಂ ಚಕ್ರ ಆತ್ಮನೇ ಅನಮಿತ್ರಾಂ (4) ಶಚೀಪತಿಃ (5) ಸಾ ನೋ ಭೂಮಿರ್ವಿ ಸೃಜತಾಂ (6) ಮಾತಾ ಪುತ್ರಾಯ (7)
ಮೇ ಪಯಃ (8) (ಛಂದಸ್ಸು : ವ್ಯವಸಾನ ಷಟ್ಪದಾ ಜಗತೀ)

**12.01.11 :** ಗಿರಯಸ್ತೇ ಪರ್ವತಾ ಹಿಮವಂತೋ (1) ಅರಣ್ಯಂ ತೇ ಪೃಥಿವಿ ಸ್ಯೋನಮಸ್ತು (2)
ಬಭ್ರುಂ ಕೃಷ್ಣಾಂ ರೋಹಿಣೀಂ ವಿಶ್ವರೂಪಾಂ (3) ಧ್ರುವಾಂ ಭೂಮಿಂ ಪೃಥಿವೀಮ್ ಇಂದ್ರಗುಪ್ತಾಮ್ (4)
ಅಜೀತೋ ಅಹತೋ ಅಕ್ಷತೋ ಅಧ್ಯಷ್ಠಾಂ ಪೃಥಿವೀಮಹಮ್ (5)

# ಭೂಮಿ ಸೂಕ್ತ

**(ಅಥರ್ವ ವೇದ, 12ನೇ ಕಾಂಡ, 1ನೇ ಸೂಕ್ತ ಹಾಗೂ**
**ಯಜುರ್ ವೇದ ತೈತ್ತಿರೀಯ ಸಂಹಿತೆ 1ನೇ ಕಾಂಡ 5ನೇ ಪ್ರಪಾಠಕ 3ನೇ ಅನುವಾಕ)**

**12.01.12 : ಯತ್ ತೇ ಮದ್ಯಂ ಪೃಥಿವಿ ಯಚ್ಚ ನಭ್ಯಂ (1) ಯಾಸ್ತ ಊರ್ಜಃ ಸ್ತನ್ವಃ ಸಂಬಭೂವುಃ (2)**
**ತಾಸು ನೋ ದೇಹಿ (3) ಅಭಿ ನಃ ಪವಸ್ವ (4) ಮಾತಾ ಭೂಮಿಃ ಪುತ್ರೋ ಅಹಂ ಪೃಥಿವ್ಯಾಃ (5)**
**ಪರ್ಜನ್ಯಃ ಪಿತಾ ಸ ಉ ನಃ ಪಿಪರ್ತು (6)** (ಛಂದಸ್ಸು : ಪಂಚಪದಾ ಶಕ್ವರೀ)

**12.01.13 : ಯಸ್ಯಾಂ ವೇದಿಂ ಪರಿಗೃಹ್ಣಂತಿ ಭೂಮ್ಯಾಂ (1) ಯಸ್ಯಾಂ ಯಜ್ಞಂ ತನ್ವತೇ ವಿಶ್ವಕರ್ಮಾಣಃ (2)**
**ಯಸ್ಯಾಂ ಮೀಯಂತೇ ಸ್ವರವಃ ಪೃಥಿವ್ಯಾಮ್ (3) ಊರ್ಧ್ವಾಃ ಶುಕ್ರಾ ಆಹುತ್ಯಾಃ ಪುರಸ್ತಾತ್ (4)**
**ಸಾ ನೋ ಭೂಮಿಃ ವರ್ಧಯದ್ ವರ್ಧಮಾನಾ (5)** (ಛಂದಸ್ಸು : ಪಂಚಪದಾ ಶಕ್ವರೀ)

**12.01.14 : ಯೋ ನೋ ದ್ವೇಷತ್ ಪೃಥಿವಿ ಯಃ ಪೃತನ್ಯಾದ್ (1) ಯೋ ಅಭಿದಾಸಾನ್ ಮನಸಾ ಯೋ ವಧೇನ (2)**
**ತಂ ನೋ ಭೂಮೇ ರಂಧಯ (3) ಪೂರ್ವಕೃತ್ವರಿ (4)** (ಛಂದಸ್ಸು : ಮಹಾಬೃಹತೀ)

**12.01.15 : ತ್ವತ್ ಜಾತಾಃ ತ್ವಯಿ ಚರಂತಿ ಮರ್ತ್ಯಾಃ (1) ತ್ವಂ ಬಿಭರ್ಷಿ ದ್ವಿಪದಃ ತ್ವಂ ಚತುಷ್ಪದಃ (2) ತವೇಮೇ ಪೃಥಿವಿ**
**ಪಂಚ ಮಾನವಾ (3) ಯೇಭ್ಯೋ ಜ್ಯೋತಿಃ ಅಮೃತಂ ಮರ್ತ್ಯೇಭ್ಯ (4) ಉದ್ಯನ್ ಸೂರ್ಯೋ ರಶ್ಮಿಭಿಃ ಆತನೋತಿ (5)**
(ಛಂದಸ್ಸು : ಪಂಚಪದಾ ಶಕ್ವರೀ)

**12.01.16 : ತಾ ನಃ ಪ್ರಜಾಃ ಸಂ ದುಹ್ವತಾಂ ಸಮಗ್ರಾ (1) ವಾಚೋ ಮಧು ಪೃಥಿವಿ ಧೇಹಿ ಮಹ್ಯಮ್ (2)**
(ಛಂದಸ್ಸು : ಏಕಾವಮ್ ಸಾಮ್ನೀ ತ್ರಿಷ್ಟುಪ್)

**12.01.17 : ವಿಶ್ವಸ್ವಂ ಮಾತರಂ ಓಷಧೀನಾಂ (1) ಧ್ರುವಾಂ ಭೂಮಿಂ ಪೃಥಿವೀಂ ಧರ್ಮಣಾ ಧೃತಾಮ್ (2)**
**ಶಿವಾಂ ಸ್ಯೋನಾಮ್ (3) ಅನು ಚರೇಮ ವಿಶ್ವಹಾ (4)** (ಛಂದಸ್ಸು : ತ್ರಿಷ್ಟುಪ್)

**12.01.18 : ಮಹತ್ ಸಧಸ್ಥಂ ಮಹತೀ ಬಭೂವಿಥ (1) ಮಹಾನ್ ವೇಗ ಏಜಥುಃ ವೇಪಥುಷ್ಟೇ (2)**
**ಮಹಾನ್ ತ್ವಾ ಇಂದ್ರೋ ರಕ್ಷತಿ ಅಪ್ರಮಾದಮ್ (3) ಸಾ ನೋ ಭೂಮೇ ಪ್ರ ರೋಚಯ (4) ಹಿರಣ್ಯಸ್ಯೇವ ಸಂದೃಶಿ (5)**
**ಮಾ ನೋ ದ್ವಿಕ್ಷತ ಕಶ್ಚನ (6)** (ಛಂದಸ್ಸು : ತ್ರೈವಮ್ ಶತಮ್ ತ್ರಿಷ್ಟುಪ್ ಅನುಷ್ಟುಪ್‌ಗರ್ಭಾತಿಶಕ್ವರೀ)

**12.01.19 : ಅಗ್ನಿಂ ಭೂಮ್ಯಾಮ್ ಓಷಧೀಷು (1) ಅಗ್ನಿಮಾಪೋ ಬಿಭ್ರತಿ (2) ಅಗ್ನಿಃ ಅಶ್ಮಸು ಅಗ್ನಿರಂತಃ ಪುರುಷೇಷು (3)**
**ಗೋಷು ಅಶ್ವೇಷು ಅಗ್ನಯಃ (4)** (ಛಂದಸ್ಸು : ಪುರೋಬೃಹತೀ)

**12.01.20 : ಅಗ್ನಿಃ ದಿವ ಆ ತಪತಿ (1) ಅಗ್ನೇರ್ದೇವಸ್ಯ ಉರು ಅಂತರಿಕ್ಷಮ್ (2)**
**ಅಗ್ನಿಂ ಮರ್ತಾಸ ಇನ್ಧತೇ (3) ಹವ್ಯವಾಹಂ ಘೃತಪ್ರಿಯಮ್ (4)** (ಛಂದಸ್ಸು : ಪುರೋಬೃಹತೀ)

**12.01.21 : ಅಗ್ನಿವಾಸಾಃ ಪೃಥಿವಿ (1) ಅಸೀತಜ್ಞೂಃ ತ್ವಿಷೀಮಂತಂ (2) ಸಂಶಿತಂ ಮಾ ಕೃಣೋತು (3)**
(ಛಂದಸ್ಸು : ಏಕಾವಮ್ ಸಾಮ್ನೀ ತ್ರಿಷ್ಟುಪ್)

**12.01.22 : ಭೂಮ್ಯಾಂ ದೇವೇಭ್ಯೋ ದದತಿ ಯಜ್ಞಂ (1) ಹವ್ಯಮರಂಕೃತಮ್ (2)**
**ಭೂಮ್ಯಾಂ ಮನುಷ್ಯಾ ಜೀವಂತಿ ಸ್ವಧಯಾ ಅನ್ನೇನ ಮರ್ತ್ಯಾಃ (3) ಸಾ ನೋ ಭೂಮಿಃ ಪ್ರಾಣಮಾಯುರ್ದಧಾತು (4)**
**ಜರದಷ್ಟಿಂ ಮಾ ಪೃಥಿವೀ ಕೃಣೋತು (5)** (ಛಂದಸ್ಸು : ತ್ರೈವ್ಯಮ್ ಶತಮ್ ವಿರಾಡತಿಜಗತೀ)

# ಭೂಮಿ ಸೂಕ್ತ

**(ಅಥರ್ವ ವೇದ, 12ನೇ ಕಾಂಡ, 1ನೇ ಸೂಕ್ತ ಹಾಗೂ**
**ಯಜುರ್ ವೇದ ತೈತ್ತಿರೀಯ ಸಂಹಿತೆ 1ನೇ ಕಾಂಡ 5ನೇ ಪ್ರಪಾಠಕ 3ನೇ ಅನುವಾಕ)**

**12.01.23 :** ಯಸ್ತೇ ಗಂಧಃ ಪೃಥಿವಿ ಸಂಬಭೂವ (1) ಯಂ ಬಿಭ್ರತಿ ಓಷಧಯೋ ಯಮಾಪಃ (2)
ಯಂ ಗಂಧರ್ವಾ ಅಪ್ಸರಸಶ್ಚ ಭೇಜಿರೇ (3) ತೇನ ಮಾ ಸುರಭಿಂ ಕೃಣು (4) ಮಾ ನೋ ದ್ವಿಕ್ಷತ ಕಶ್ಚನ (5)
(ಛಂದಸ್ಸು : ಪಂಚಪದಾ ವಿರಾಡತಿಜಗತೀ)

**12.01.24 :** ಯಸ್ತೇ ಗಂಧಃ ಪುಷ್ಕರಮ್ ಆವಿವೇಶ (1) ಯಂ ಸಂಜಭ್ರುಃ ಸೂರ್ಯಾಯಾ ವಿವಾಹೇ ಅಮರ್ತ್ಯಾಃ (2)
ಪೃಥಿವಿ (3) ಗಂಧಮಗ್ರೇ (4) ತೇನ ಮಾ ಸುರಭಿಂ ಕೃಣು (5) ಮಾ ನೋ ದ್ವಿಕ್ಷತ ಕಶ್ಚನ (6)
(ಛಂದಸ್ಸು : ಪಂಚಮ್ ಅನುಷ್ಟುಬ್ಗರ್ಭಾ ಜಗತೀ)

**12.01.25 :** ಯಸ್ತೇ ಗಂಧಃ ಪುರುಷೇಷು ಸ್ತ್ರೀಷು (1) ಪುಂಸು ಭಗೋ ರುಚಿಃ (2)
ಯೋ ಅಶ್ವೇಷು ವೀರೇಷು ಯೋ ಮೃಗೇಷೂತ ಹಸ್ತಿಷು (3) ಕನ್ಯಾಯಾಂ ವರ್ಚೋ (4)
ಯದ್ ಭೂಮೇ ತೇನಾಸ್ಮಾನ್ ಅಪಿ ಸಂ ಸೃಜ (5) ಮಾ ನೋ ದ್ವಿಕ್ಷತ ಕಶ್ಚನ (6)
(ಛಂದಸ್ಸು : ತ್ರೈವ್ಯಮ್ ಸಪ್ತಮ್ ಉಷ್ಣಿಬ್ ಅನುಷ್ಟುಬ್ ಗರ್ಭಾ ಶಕ್ವರೀ)

**12.01.26 :** ಶಿಲಾ ಭೂಮಿ: ಅಶ್ಮಾ ಪಾಂಸುಃ (1) ಸಾ ಭೂಮಿಃ ಸಂಧೃತಾ ಧೃತಾ (2)
ತಸ್ಮೈ ಹಿರಣ್ಯವಕ್ಷಸೇ (3) ಪೃಥಿವ್ಯಾ (4) ಅಕರಂ (5) ನಮಃ (6) (ಛಂದಸ್ಸು : ಅನುಷ್ಟುಪ್)

**12.01.27 :** ಯಸ್ಯಾಂ ವೃಕ್ಷಾ ವಾನಸ್ಪತ್ಯಾ ಧ್ರುವಾಃ ತಿಷ್ಟಂತಿ ವಿಶ್ವಹಾ (1)
ಪೃಥಿವೀಂ ವಿಶ್ವಧಾಯಸಂ ಧೃತಾಮ್ ಅಚ್ಛಾ ವದಾಮಸಿ (2) (ಛಂದಸ್ಸು : ತ್ರಿಷ್ಟುಪ್)

**12.01.28 :** ಉದೀರಾಣಾ ಉತಾಸೀನಾಃ ತಿಷ್ಠಂತಃ ಪ್ರಕ್ರಾಮಂತಃ (1)
ಪದ್ಭ್ಯಾಂ ದಕ್ಷಿಣ-ಸವ್ಯಾಭ್ಯಾಂ (2) ಮಾ ವ್ಯಥಿಷ್ಮಹಿ ಭೂಮ್ಯಾಮ್ (3) (ಛಂದಸ್ಸು : ಅನುಷ್ಟುಪ್)

**12.01.29 :** ವಿಮೃಗ್ವರೀಂ ಪೃಥಿವೀಮಾ ವದಾಮಿ (1) ಕ್ಷಮಾಂ ಭೂಮಿಂ ಬ್ರಹ್ಮಣಾ ವಾವೃಧಾನಾಮ್ (2)
ಊರ್ಜಂ ಪುಷ್ಟಂ ಬಿಭ್ರತೀಮ್ (3) ಅನ್ನಭಾಗಂ ಘೃತಂ (4) ತ್ವಾಭಿ ನಿ ಷೀದೇಮ ಭೂಮೇ (5) (ಛಂದಸ್ಸು : ತ್ರಿಷ್ಟುಪ್)

**12.01.30 :** ಶುದ್ಧಾ ನ ಆಪಃ ತನ್ವೇ ಕ್ಷರಂತು (1) ಯೋ ನಃ ಸೇದುಃ ಅಪ್ರಿಯೇ ತಂ ನಿ ದಧ್ಮಃ (2)
ಪವಿತ್ರೇಣ ಪೃಥಿವಿ ಮಾ ಉತ್ ಪುನಾಮಿ (3) (ಛಂದಸ್ಸು : ವಿರಾಡ ಗಾಯತ್ರೀ)

**12.01.31 :** ಯಾಸ್ತೇ ಪ್ರಾಚೀಃ (1) ಪ್ರದಿಶೋ (2) ಯಾ ಉದೀಚೀಃ (3) ಯಾಸ್ತೇ ಭೂಮೇ (4)
ಅಧರಾದ್ ಯಾಶ್ಚ ಪಶ್ಚಾತ್ (5) ಸ್ಯೋನಾಃ ತಾ ಮಹ್ಯಂ ಚರತೇ ಭವಂತು (6)
ಮಾ ನಿ ಪಪ್ತಂ ಭುವನೇ ಶಿಶ್ರಿಯಾಣಃ (7) (ಛಂದಸ್ಸು : ತ್ರಿಷ್ಟುಪ್)

**12.01.32 :** ಮಾ ನಃ (1) ಪಶ್ಚಾತ್ ಮಾ ಪುರಸ್ತಾತ್ (2) ನುದಿಷ್ಠಾ (3) ಮೋತ್ತರಾತ್ ಅಧರಾದುತ(4)
ಸ್ವಸ್ತಿ ಭೂಮೇ ನೋ ಭವ (5) ಮಾ ವಿದನ್ ಪರಿಪಂಥಿನೋ (6)
ವರೀಯೋ ಯಾವಯಾ ವಧಮ್ (7) (ಛಂದಸ್ಸು : ಪುರಸ್ತಾಜ್ಯೋತಿಃ)

# ಭೂಮಿ ಸೂಕ್ತ

**(ಅಥರ್ವ ವೇದ, 12ನೇ ಕಾಂಡ, 1ನೇ ಸೂಕ್ತ ಹಾಗೂ**
**ಯಜುರ್ ವೇದ ತೈತ್ತಿರೀಯ ಸಂಹಿತೆ 1ನೇ ಕಾಂಡ 5ನೇ ಪ್ರಪಾಠಕ 3ನೇ ಅನುವಾಕ)**

**12.01.33 : ಯಾವ॑ತ್ ತೇ॒ ಅಭಿ ವಿ॒ಪಶ್ಯಾ॑ಮಿ ಭೂಮೇ॒ (1) ಸೂರ್ಯೇ॑ಣ ಮೇ॒ದಿನಾ॑ (2)**
**ತಾವ॑ನ್ಮೇ॒ ಚಕ್ಷುಃ॒ ಮಾ ಮೇ॒ಷ್ಟ (3) ಉತ್ತ॒ರಾಮ್ ಉತ್ತ॒ರಾಂ॒ ಸಮಾ॑ಮ್ (4)** (ಛಂದಸ್ಸು : ಅನುಷ್ಟುಪ್)

**12.01.34 : ಯತ್ ಶಯಾ॑ನಃ ಪ॒ರ್ಯಾವರ್ತೇ॒ ದಕ್ಷಿ॑ಣಂ ಸ॒ವ್ಯಮ್ ಅಭಿ ಭೂ॑ಮೇ ಪಾ॒ರ್ಶ್ವಮ್ (1)**
**ಉ॒ತ್ತಾನಾಃ ತ್ವಾ॒ ಪ್ರ॒ತೀಚೀಂ ಯತ್ ಪೃ॒ಷ್ಟೀಭಿಃ ಅಧಿಶೇಮ॑ಹೇ (2) ಮಾ ಹಿಂಸೀಃ ತತ್ರ ನೋ ಭೂಮೇ॒ (3)**
**ಸರ್ವ॑ಸ್ಯ ಪ್ರತಿಶೀವರಿ (4)** (ಛಂದಸ್ಸು : ತ್ರೈವಮ್ ಶತಮ್ ತ್ರಿಷ್ಟುಪ್ ಬೃಹತೀ ಗರ್ಭಾತಿಜಗತೀ)

**12.01.35 : ಯತ್ ತೇ॑ ಭೂಮೇ ವಿ॒ಖನಾ॑ಮಿ (1) ಕ್ಷಿ॒ಪ್ರಂ ತದಪಿ ರೋಹತು (2)**
**ಮಾ ತೇ॒ ಮರ್ಮ॑ ವಿಮೃಗ್ವರಿ॒ (3) ಮಾ ತೇ॒ ಹೃದ॑ಯಮ್ ಅರ್ಪಿಪಮ್ (4)** (ಛಂದಸ್ಸು : ಅನುಷ್ಟುಪ್)

**12.01.36 : ಗ್ರೀ॒ಷ್ಮಸ್ತೇ॑ ಭೂಮೇ ವ॒ರ್ಷಾಣಿ॑ ಶರತ್ (1) ಹೇಮ॒ಂತಃ ಶಿಶಿ॑ರೋ ವಸ॒ಂತಃ (2)**
**ಋ॒ತವ॑ಸ್ತೇ॒ ವಿಹಿ॑ತಾ ಹಾಯನೀಃ (3) ಅಹೋರಾ॒ತ್ರೇ ಪೃಥಿವಿ ನೋ ದುಹಾತಾಮ್ (4)** (ಛಂದಸ್ಸು : ವಿಪರೀತಪಾದಲಕ್ಷ್ಮಾ ಪಂಕ್ತಿಃ)

**12.01.37 : ಯಾಪ॑ ಸರ್ಪಂ ವಿಜಮಾ॑ನಾ ವಿ॒ಮೃಗ್ವರೀ॒ (1) ಯಸ್ಯಾ॒ಮ್ ಆಸ॒ನ್ ಅಗ್ನಯೋ॒ ಯೇ ಅ॒ಪ್ಸು ಅಂತಃ (2)**
**ಪರಾ॒ ದಸ್ಯೂನ್ ದದತೀ ದೇವಪೀ॒ಯೂನ್ (3) ಇಂದ್ರ॑ಂ ವೃಣಾ॒ನಾ ಪೃಥಿ॒ವೀ ನ ವೃ॒ತ್ರಮ್ (4)**
**ಶ॒ಕ್ರಾಯ॑ ದಧ್ರೇ ವೃಷಭಾಯ ವೃಷ್ಣೇ॑ (5)** (ಛಂದಸ್ಸು : ತ್ರೈವ್ಯಮ್ ಪಂಚಮ್ ಶಕ್ವರೀ)

**12.01.38 : ಯಸ್ಯಾ॑ಂ ಸದೋ ಹವಿರ್ಧಾ॒ನೇ ಯೂಪೋ॒ ಯಸ್ಯಾ॑ಂ ನಿಮೀ॒ಯತೇ॑ (1)**
**ಬ್ರ॒ಹ್ಮಾಣೋ॒ ಯಸ್ಯಾ॒ಮ್ ಅರ್ಚ॑ಂತಿ ಋಗ್ಭಿಃ ಸಾಮ್ನಾ॒ (2) ಯಜು॒ರ್ವಿದಃ ಯು॒ಜ್ಯಂತೇ॒ (3)**
**ಯಸ್ಯಾ॑ಮೃ॒ತ್ವಿಜಃ ಸೋಮ॒ಮಿಂದ್ರಾ॑ಯ॒ ಪಾತ॑ವೇ (4)** (ಛಂದಸ್ಸು : ತ್ರಿಷ್ಟುಪ್)

**12.01.39 : ಯಸ್ಯಾಂ॒ ಪೂರ್ವೇ॑ ಭೂತ॒ಕೃತ॒ ಋಷ॑ಯೋ॒ (1) ಗಾ ಉತ್ ಆನೃ॒ಚುಃ (2)**
**ಸ॒ಪ್ತ ಸ॒ತ್ರೇಣ॑ ವೇ॒ಧಸೋ॑ ಯ॒ಜ್ಞೇನ॒ ತಪ॑ಸಾ॒ ಸಹ (3)** (ಛಂದಸ್ಸು : ಅನುಷ್ಟುಪ್)

**12.01.40 : ಸಾ ನೋ॒ ಭೂಮಿಃ॒ ಆ ದಿ॑ಶತು ಯದ್ಧನ॑ಂ ಕಾಮ॒ಯಾ॑ಮಹೇ (1)**
**ಭಗೋ॑ ಅನು॒ಪ್ರಯು॑ಂಕ್ತಾ॒ಮ್ (2) ಇಂದ್ರ॒ ಏತು ಪುರೋ॒ಗವಃ (3)** (ಛಂದಸ್ಸು : ಅನುಷ್ಟುಪ್)

**12.01.41 : ಯಸ್ಯಾಂ॒ ಗಾಯ॑ಂತಿ ನೃತ್ಯ॑ಂತಿ ಭೂಮ್ಯಾಂ॒ ಮರ್ತ್ಯಾ॒ ವ್ಯೈಲವಾಃ (1)**
**ಯುಧ್ಯಂತೇ॑ ಯಸ್ಯಾ॑ಮಾಕ್ರ॒ನ್ದೋ॒ ಯಸ್ಯಾಂ॒ ವದತಿ ದುನ್ದು॒ಭಿಃ (2) ಸಾ ನೋ॒ ಭೂಮಿಃ॒ ಪ್ರ ಣು॑ದತಾಂ ಸ॒ಪತ್ನಾ॑ನ್ (3)**
**ಅಸಪ॒ತ್ನಂ ಮಾ॑ ಪೃಥಿವೀ ಕೃ॒ಣೋತು (4)** (ಛಂದಸ್ಸು : ಅನುಷ್ಟುಪ್)

**12.01.42 : ಯಸ್ಯಾ॒ಮನ್ನ॑ಂ ವ್ರೀಹಿ ಯ॒ವೌ (1) ಯಸ್ಯಾ॑ ಇಮಾಃ ಪಂಚ॑ ಕೃ॒ಷ್ಟಯಃ (2)**
**ಭೂಮ್ಯೈ॑ ಪ॒ರ್ಜನ್ಯಪತ್ನ್ಯೈ॒ ನಮೋ॑ ಅಸ್ತು (3) ವ॒ರ್ಷ ಮೇ॑ದಸೇ (4)** (ಛಂದಸ್ಸು : ಸ್ವರಾಡ್ – ಅನುಷ್ಟುಪ್)

**12.01.43 : ಯಸ್ಯಾಃ॒ ಪುರೋ॑ ದೇವಕೃ॑ತಾ॒ (1) ಕ್ಷೇತ್ರೇ॒ ಯಸ್ಯಾ॑ ವಿಕು॒ರ್ವತೇ॑ (2)**
**ಪ್ರ॒ಜಾಪತಿಃ ಪೃಥಿವೀಂ ವಿ॒ಶ್ವಗರ್ಭಾ॒ಮ್ (3) ಆಶಾ॑ಮಾಶಾಂ॒ ರಣ್ಯಾ॑ಂ ನಃ ಕೃಣೋತು (4)** (ಛಂದಸ್ಸು : ವಿರಾಟ್ ಆಸ್ತಾರಪಂಕ್ತಿಃ)

# ಭೂಮಿ ಸೂಕ್ತ

(ಅಥರ್ವ ವೇದ, 12ನೇ ಕಾಂಡ, 1ನೇ ಸೂಕ್ತ ಹಾಗೂ
ಯಜುರ್ ವೇದ ತೈತ್ತಿರೀಯ ಸಂಹಿತೆ 1ನೇ ಕಾಂಡ 5ನೇ ಪ್ರಪಾಠಕ 3ನೇ ಅನುವಾಕ)

**12.01.44 :** ನಿಧಿಂ ಬಿಭ್ರತೀ ಬಹುಧಾ ಗುಹಾ (1) ವಸು ಮಣಿಂ ಹಿರಣ್ಯಂ ಪೃಥಿವೀ ದದಾತು ಮೇ (2)
ವಸೂನಿ ನೋ ವಸುದಾ ರಾಸಮಾನಾ ದೇವೀ ದಧಾತು (3) ಸುಮನಸ್ಯಮಾನಾ (4) (ಛಂದಸ್ಸು : ಜಗತೀ)

**12.01.45 :** ಜನಂ ಬಿಭ್ರತೀ ಬಹುಧಾ ವಿವಾಚಸಂ (1) ನಾನಾಧರ್ಮಾಣಂ ಪೃಥಿವೀ (2) ಯಥಾ ಓಕಸಮ್ (3)
ಸಹಸ್ರಂ ಧಾರಾ ದ್ರವಿಣಸ್ಯ ಮೇ ದುಹಾಂ (4) ಧ್ರುವೇವ ಧೇನುಃ ಅನಪಸ್ಫುರಂತೀ (5) (ಛಂದಸ್ಸು : ಜಗತೀ)

**12.01.46 :** ಯಸ್ತೇ ಸರ್ಪೋ ವೃಶ್ಚಿಕಃ ತೃಷ್ಟದಂಶ್ಮಾ (1) ಹೇಮಂತ ಜಬ್ಧೋ ಭೃಮಲೋ ಗುಹಾ ಶಯೇ (2)
ಕ್ರಿಮಿಃ ಜಿನ್ವತ್ ಪೃಥಿವಿ ಯದ್ ಯದೇಜತಿ (3) ಪ್ರಾವೃಷಿ (4) ತನ್ನಃ ಸರ್ಪನ್ಮೋಪ ಸೃಪದ್ (5)
ಯತ್ ಶಿವಂ ತೇನ ನೋ ಮೃಡ (6) (ಛಂದಸ್ಸು : ಷಟ್ಪದಮ್ ಅನುಷ್ಟುಬ್ಗರ್ಭಾ ಕಕುಮ್ಮತೀ ಶಕ್ವರೀ)

**12.01.47 :** ಯೇ ತೇ ಪಂಥಾನೋ ಬಹವೋ ಜನಾಯನಾ (1) ರಥಸ್ಯ ವರ್ತ್ಮಾನಸಃ ಚ ಯಾತವೇ (2)
ಯೈಃ ಸಂಚರತ್ ಉಭಯೇ ಭದ್ರಪಾಪಾಃ (3) ತಂ ಪಂಥಾನಂ ಜಯೇಮಾನ್ ಅಮಿತ್ರಮತಸ್ಕರಂ (4)
ಯತ್ ಶಿವಂ ತೇನ ನೋ ಮೃಡ (5) (ಛಂದಸ್ಸು : ತ್ರಿಷ್ಟುಪ್)

**12.01.48 :** ಮಲ್ವಂ ಬಿಭ್ರತೀ ಗುರುಭೃದ್ (1) ಭದ್ರಪಾಪಸ್ಯ ನಿಧನಂ ತಿತಿಕ್ಷುಃ (2)
ವರಾಹೇಣ ಪೃಥಿವೀ ಸಂವಿದಾನಾ (3) ಸೂಕರಾಯ ವಿ ಜಿಹೀತ ಮೃಗಾಯ (4) (ಛಂದಸ್ಸು : ತಿಷ್ಟುಪ್)

**12.01.49 :** ಯೇ ತ ಆರಣ್ಯಾಃ ಪಶವೋ ಮೃಗಾ ವನೇ ಹಿತಾಃ (1) ಸಿಂಹಾ ವ್ಯಾಘ್ರಾಃ ಪುರುಷಾದಃ ಚರಂತಿ (2)
ಉಲಂ ವೃಕಂ ಪೃಥಿವಿ ದುಚ್ಛುನಾಮಿತ ಋಕ್ಷೀಕಾಂ ರಕ್ಷೋ (3) ಅಪ ಬಾಧಯಾಸ್ಮತ್ (4) (ಛಂದಸ್ಸು : ತಿಷ್ಟುಪ್)

**12.01.50 :** ಯೇ ಗಂಧರ್ವಾ ಅಪ್ಸರಸೋ ಯೇ ಚಾರಾಯಾಃ ಕಿಮೀದಿನಃ (1)
ಪಿಶಾಚಾನ್ ಸರ್ವಾ ರಕ್ಷಾಂಸಿ (2) ತಾನಸ್ಮದ್ ಭೂಮೇ ಯಾವಯ (3) (ಛಂದಸ್ಸು : ಅನುಷ್ಟುಪ್)

**12.01.51 :** ಯಾಂ ದ್ವಿಪಾದಃ ಪಕ್ಷಿಣಃ ಸಂಪತಂತಿ (1) ಹಂಸಾಃ ಸುಪರ್ಣಾಃ ಶಕುನಾ ವಯಾಂಸಿ (2)
ಯಸ್ಯಾಂ ವಾತೋ ಮಾತರಿಶ್ವ ಯತೇ (3) ರಜಾಂಸಿ ಕೃಣ್ವನ್ ಚ್ಯವಯನ್ ಚ ವೃಕ್ಷಾನ್ (4)
ವಾತಸ್ಯ ಪ್ರವಾಮುಪವಾಮನು ವಾತ್ಯರ್ಚಿಃ (5) (ಛಂದಸ್ಸು : ತಿಷ್ಟುಪ್)

**12.01.52 :** ಯಸ್ಯಾಂ ಕೃಷ್ಣಮರುಣಂ ಚ ಸಂಹಿತೇ ಅಹೋರಾತ್ರೇ (1) ವಿಹಿತೇ ಭೂಮ್ಯಾಮಧಿ (2)
ವರ್ಷೇಣ ಭೂಮಿಃ ಪೃಥಿವೀ ವೃತಾವೃತಾ (3) ಸಾ ನೋ ದಧಾತು ಭದ್ರಯಾ ಪ್ರಿಯೇ ಧಾಮನಿ ಧಾಮನಿ (4)
(ಛಂದಸ್ಸು : ಪಂಚಮ್ ಅನುಷ್ಟುಬ್ಗರ್ಭಾ ಪರಾತಿಜಗತೀ)

**12.01.53 :** ದ್ಯೌಶ್ಚ ಮ ಇದಂ ಪೃಥಿವೀ ಚಾಂತರಿಕ್ಷಂ ಚ (1) ಮೇ ವ್ಯಚಃ (2) ಅಗ್ನಿಃ ಸೂರ್ಯ ಆಪೋ (3)
ಮೇಧಾಂ (4) ವಿಶ್ವೇ ದೇವಾಃ ಚ (5) ಸಂ ದದುಃ (6) (ಛಂದಸ್ಸು : ಅನುಷ್ಟುಪ್)

**12.01.54 :** ಅಹಮಸ್ಮಿ ಸಹಮಾನ (1) ಉತ್ತರೋ ನಾಮ ಭೂಮ್ಯಾಮ್ (2)
ಅಭೀಷಾಡಸ್ಮಿ (3) ವಿಶ್ವಾಷಾಡ್ (4) ಆಶಾಮಾಶಾಂ ವಿ ಷಾಸಹಿಃ (5) (ಛಂದಸ್ಸು : ಅನುಷ್ಟುಪ್)

# ಭೂಮಿ ಸೂಕ್ತ

(ಅಥರ್ವ ವೇದ, 12ನೇ ಕಾಂಡ, 1ನೇ ಸೂಕ್ತ ಹಾಗೂ
ಯಜುರ್ ವೇದ ತೈತ್ತಿರೀಯ ಸಂಹಿತೆ 1ನೇ ಕಾಂಡ 5ನೇ ಪ್ರಪಾಠಕ 3ನೇ ಅನುವಾಕ)

**12.01.55 :** ಅದೋ ಯದ್ ದೇವಿ ಪ್ರಥಮಾನಾ ಪುರಸ್ತಾದ್ ದೇವೈಃ ಉಕ್ತಾ (1) ವ್ಯಸರ್ಪೋ ಮಹಿತ್ವಮ್ (2)
ಆ ತ್ವಾ ಸುಭೂತಮವಿಶತ್ (3) ತದಾನೀಮ್ ಅಕಲ್ಪಯಥಾಃ ಪ್ರದಿಶ ಚತಸ್ರಃ (4) (ಛಂದಸ್ಸು : ತ್ರಿಷ್ಟುಪ್)

**12.01.56 :** ಯೇ ಗ್ರಾಮಾ ಯದರಣ್ಯಂ ಯಾಃ ಸಭಾ ಅಧಿ ಭೂಮ್ಯಾಮ್ (1)
ಯೇ ಸಂಗ್ರಾಮಾಃ ಸಮಿತಯಃ (2) ತೇಷು ಚಾರು ವದೇಮ ತೇ (3) (ಛಂದಸ್ಸು : ಅನುಷ್ಟುಪ್)

**12.01.57 :** ಅಶ್ವ ಇವ ರಜೋ (1) ದುಧುವೇ (2) ವಿ ತಾನ್ ಜನಾನ್ ಯ ಆಕ್ಷಿಯನ್ (3) ಪೃಥಿವೀಂ ಯಾದಜಾಯತ (4)
ಮಂದ್ರಾ ಅಗ್ರೇತ್ವರೀ ಭುವನಸ್ಯ ಗೋಪಾ (5) ವನಸ್ಪತೀನಾಂ ಗೃಭಿಃ ಓಷದೀನಾಮ್ (6) (ಛಂದಸ್ಸು : ಪುರೋತಿಜಾಗತಾ ಜಗತೀ)

**12.01.58 :** ಯದ್ ವದಾಮಿ ಮಧುಮತ್ ತದ್ ವದಾಮಿ (1) ಯದ್ ಈಕ್ಷೇ ತದ್ ವನಂತಿ ಮಾ (2)
ತ್ವಿಷೀಮಾನಸ್ಮಿ ಜೂತಿಮಾನ್ (3) ಅವ ಅನ್ಯಾನ್ ಹನ್ಮಿ ದೋಧತಃ (4) (ಛಂದಸ್ಸು : ಪುರಸ್ತಾದ್‌ಬೃಹತೀ)

**12.01.59 :** ಶನ್ತಿವಾ ಸುರಭಿಃ ಸ್ಯೋನಾ (1) ಕೀಲಾಲೋಧ್ನೀ ಪಯಸ್ವತೀ (2)
ಭೂಮಿರಧಿ ಬ್ರವೀತು ಮೇ (3) ಪೃಥಿವೀ ಪಯಸಾ ಸಹ (4) (ಛಂದಸ್ಸು : ಅನುಷ್ಟುಪ್)

**12.01.60 :** ಯಾಮ್ ಅನ್ವೈಚ್ಛತ್ ಹವಿಷಾ ವಿಶ್ವಕರ್ಮಾ (1) ಅಂತರರ್ಣವೇ ರಜಸಿ ಪ್ರವಿಷ್ಟಾಮ್ (2)
ಭುಜಿಷ್ಯಂ ಪಾತ್ರಂ ನಿಹಿತಂ ಗುಹಾ (3) ಯತ್ ಆವಿರ್ಭೋಗೇ (4) ಅಭವತ್ ಮಾತೃಮದ್ಭ್ಯಃ (5) (ಛಂದಸ್ಸು : ತ್ರಿಷ್ಟುಪ್)

**12.01.61 :** ತ್ವಮ್ ಅಸ್ಯ ಅವಪನೀ ಜನಾನಾಮ್ (1) ಅದಿತಿಃ ಕಾಮದುಘಾ ಪಪ್ರಥಾನಾ (2)
ಯತ್ ತ ಊನಂ ತತ್ ತ ಆ ಪೂರಯಾತಿ (3) ಪ್ರಜಾಪತಿಃ ಪ್ರಥಮಜಾ ಋತಸ್ಯ (4) (ಛಂದಸ್ಸು : ಪುರೋವಾರ್ಹತಃ)

**12.01.62 :** ಉಪಸ್ಥಾಃ ತೇ (1) ಅನಮೀವಾ ಅಯಕ್ಷ್ಮಾ (2) ಅಸ್ಮಭ್ಯಂ ಸಂತು ಪೃಥಿವಿ ಪ್ರಸೂತಾಃ (3)
ದೀರ್ಘಂ ನ ಆಯುಃ ಪ್ರತಿಬುದ್ಧ್ಯಮಾನಾ (4) ವಯಂ ತುಭ್ಯಂ ಬಲಿಹೃತಃ ಸ್ಯಾಮ (5) (ಛಂದಸ್ಸು : ಪರಾ ವಿರಾಟ್)

**12.01.63 :** ಭೂಮೇ ಮಾತಃ ನಿ ಧೇಹಿ ಮಾ ಭದ್ರಯಾ ಸು-ಪ್ರತಿಷ್ಠಿತಮ್ (1)
ಸಂವಿದಾನಾ ದಿವಾ (2) ಕವೇ ಶ್ರಿಯಾಂ ಮಾ ದೇಹಿ ಭೂತ್ಯಾಮ್ (3) (ಛಂದಸ್ಸು : ತ್ರಿಷ್ಟುಪ್)

# ಭೂಮಿ ಸೂಕ್ತ

(ಅಥರ್ವ ವೇದ, 12ನೇ ಕಾಂಡ, 1ನೇ ಸೂಕ್ತ ಹಾಗೂ
ಯಜುರ್ ವೇದ ತೈತ್ತಿರೀಯ ಸಂಹಿತೆ 1ನೇ ಕಾಂಡ 5ನೇ ಪ್ರಪಾಠಕ 3ನೇ ಅನುವಾಕ)

1. ಭೂಮಿರ್ಭೂಮ್ನಾ ದ್ಯೌರ್ವರಿಣಾ ಅಂತರಿಕ್ಷಂ ಮಹಿತ್ವಾ (1)
ಉಪಸ್ಥೇ ತೇ ದೇವ್ಯದಿತೇ ಅಗ್ನಿಮನ್ನಾದಮನ್ನಾದ್ಯಾಯಾ ಆದಧೇ (2)

2. ಆಯಂ ಗೌಃ ಪೃಶ್ನಿರಕ್ರಮೀತ್ ಅಸನನ್ಮಾತರಂ ಪುನಃ (1) ಪಿತರಂ ಚ ಪ್ರಯನ್ಸುವಃ (2)

3. ತ್ರಿಗಂಶದ್ಧಾಮ ವಿ ರಾಜತಿ ವಾಕ್ಪತಙ್ಗಾಯ ಶಿಶ್ರಿಯೇ (1) ಪ್ರತ್ಯಸ್ಯ ವಹ ದ್ಯುಭಿಃ (2)

4. ಅಸ್ಯ ಪ್ರಾಣಾದಪಾನತಿ ಅಂತಶ್ಚರತಿ ರೋಚನ (1) ವ್ಯಖ್ಯನ್ಮಹಿಷಃ ಸುವಃ (2)

5. ಯತ್ತ್ವಾ ಕ್ರುದ್ಧಃ ಪರೋವಪ ಮನ್ಯುನಾ ಯದವರ್ತ್ಯಾ (1) ಸುಕಲ್ಪಮಗ್ನೇ ತತ್ತವ ಪುನಸ್ ತ್ವಾ ಉದ್ದೀಪಯಾಮಸಿ (2)

6. ಯತ್ತೇ ಮನ್ಯುಪರೋಪ್ತಸ್ಯ ಪೃಥಿವೀಮನು ದದ್ವಸೇ (1) ಆದಿತ್ಯಾ ವಿಶ್ವೇ ತದ್ದೇವಾ ವಸವಶ್ಚ ಸಮಾಭರನ್ (2)

7. ಮನೋ ಜ್ಯೋತಿರ್ಜುಷತಾಮಾಜ್ಯಂ (1) ವಿಚ್ಛಿನ್ನಂ ಯಜ್ಞಗಂ ಸಮಿಮಂ ದಧಾತು (2)
ಬೃಹಸ್ಪತಿಸ್ತನುತಾಮಿಮಂ (3) ನೋ ವಿಶ್ವೇ ದೇವಾ ಇಹ ಮಾದಯಂತಾಮ್ (4)

8. ಸಪ್ತ ತೇ ಅಗ್ನೇ ಸಮಿಧಃ ಸಪ್ತ ಜಿಹ್ವಾಃ (1) ಸಪ್ತ ಋಷಯಃ ಸಪ್ತ ಧಾಮ ಪ್ರಿಯಾಣಿ (2)
ಸಪ್ತ ಹೋತ್ರಾಃ ಸಪ್ತಧಾ ತ್ವಾ ಯಜಂತಿ (3) ಸಪ್ತ ಯೋನೀರಾ ಪೃಣಸ್ವಾ ಘೃತೇನ (4)

9. ಪುನರೂರ್ಜಾ ನಿವರ್ತಸ್ವ ಪುನರಗ್ನ ಇಷಾಯುಷಾ (1) ಪುನರ್ನಃ ಪಾಹಿ ವಿಶ್ವತಃ (2)

10. ಸಹ ರಯ್ಯಾ ನಿ ವರ್ತಸ್ವಾಗ್ನೇ (1) ಪಿನ್ವಸ್ವ ದ್ಧಾರಯಾ (2) ವಿಶ್ವಪ್ಸ್ನಿಯಾ ವಿಶ್ವತಸ್ಪರಿ (3)

11. ಲೇಕಃ ಸಲೇಕಃ ಸುಲೇಕಸ್ತೇ ನ ಆದಿತ್ಯಾ ಆಜ್ಯಂ ಜುಷಾಣಾ ವಿಯಂತು

12. ಕೇತ ಸಕೇತಃ ಸುಕೇತಸ್ತೇ ನ ಆದಿತ್ಯಾ ಆಜ್ಯಂ ಜುಷಾಣಾವಿಯಂತು

13. ವಿವಸ್ವಾಗಂ ಅದಿತಿರ್ದೇವಜೂತಿಃ (1)

# ಭೂಮಿ ಸೂಕ್ತ

(ಅಥರ್ವ ವೇದ, 12ನೇ ಕಾಂಡ, 1ನೇ ಸೂಕ್ತ ಹಾಗೂ
ಯಜುರ್ ವೇದ ತೈತ್ತಿರೀಯ ಸಂಹಿತೆ 1ನೇ ಕಾಂಡ 5ನೇ ಪ್ರಪಾಠಕ 3ನೇ ಅನುವಾಕ)

## ಓದುಗರೊಡನೆ

ಯಾವುದೇ ಯಂತ್ರಗಳ ಸಹಾಯವಿಲ್ಲದೆ ಮಾನಸಿಕ ಶಕ್ತಿಗಳ ಮೂಲಕ ದೈಹಿಕವಾಗಿ ಅಂತರಿಕ್ಷದಲ್ಲಿ ಹಾರಾಡುತ್ತಾ ಬ್ರಹ್ಮಾಂಡದಲ್ಲಿನ ವಿಶೇಷತೆಗಳನ್ನು ನೋಡುತ್ತಾ ಜೀವನ ಕಳೆಯಲು ಸಾಧ್ಯವಾಗಬಹುದು ಎಂದು ಸುಮಾರು ಪ್ರಯತ್ನ ಮಾಡಿದರೂ ಸಹ ಹಾರಾಡುವ ಕನಸುಗಳು ಬರುತ್ತಿತ್ತೇ ಹೊರತು ದೇಹದೊಂದಿಗೆ ಹಾರಾಡಲು ಸಾಧ್ಯವಾಗಲಿಲ್ಲ. ಈ ಪ್ರಯತ್ನದಲ್ಲಿ ನನ್ನ ಮಾನಸಿಕ ಶಕ್ತಿಗಳಾದ ಭ್ರಮೆ, ಭಯ, ನಿದ್ದೆ, ಕಾಮ, ಕ್ರೋಧ, ಲೋಭ, ಮದ, ಮತ್ಸರಗಳ ಪ್ರಭಾವ ಹೆಚ್ಚಾಗುತ್ತಾ ದೇಹದ ಮೇಲೆ ಹಿಡಿತ ಕಮ್ಮಿಯಾಗತೊಡಗಿತು, ದೇಹ ತನ್ನ ಅಸ್ತಿತ್ವ ಉಳಿಸಿಕೊಳ್ಳುವ ಪ್ರಭಾವದಿಂದ ಮನಸ್ಸಿನಲ್ಲಿ ಆಂದೋಳನ ಆರಂಭವಾಯಿತು, ಆಗ ನನ್ನ ನಡುವಳಿಕೆ ವಿಚಿತ್ರವಾಗಿತ್ತು. ಸಮತೋಲನದಿಂದಿರಲು ನಾನು ಪ್ರತಿದಿನವೂ ಮಂತ್ರಗಳನ್ನು ಹೇಳುತ್ತಿದ್ದೆ. ಯೋಗ, ಧ್ಯಾನ ಮಾಡುತ್ತಿದ್ದೆ, ದೇವಸ್ಥಾನಗಳಿಗೆ, ಉಪನ್ಯಾಸಗಳಿಗೆ ಹೋಗುತ್ತಿದ್ದೆ. ನಮ್ಮ ಭಾರತೀಯ ಸಂಸ್ಕೃತಿಯನ್ನು ಆಳವಾಗಿ ತಿಳಿದುಕೊಳ್ಳಲು ಬಯಸಿದಾಗ ಜಯನಗರದಲ್ಲಿರುವ ಶ್ರೀ ಅರೋಬಿಂದೊ ಕಪಾಲಿಶಾಸ್ತ್ರಿ ವೇದಸಂಸ್ಕೃತಿ ಸಂಸ್ಥೆ(ಸಾಕ್ಷಿ)ಯವರ ಮಾರ್ಗದರ್ಶನದಲ್ಲಿ ವೇದ ಮಂತ್ರಗಳ ಅರ್ಥ ತಿಳಿದುಕೊಳ್ಳುತ್ತಾ ಪಠಣಾಭ್ಯಾಸ ಆರಂಭಿಸಿದೆ, ಈ ವೇದ ಯೋಗದಿಂದ ಮನೋದೈಹಿಕ ಶಕ್ತಿಗಳನ್ನು ಮನಸ್ಸಿನಿಂದಲೇ ಸಜ್ಜುಗೊಳಿಸುವ ಜ್ಞಾನವನ್ನು ಬೆಳಸಿಕೊಳ್ಳುತ್ತಾ ಸತ್ಯದ ದಾರಿಯಲ್ಲಿ ಸಂಚರಿಸಲು ಬಲವಾದ ಮಾರ್ಗ ಸಿಕ್ಕಿತು. ಅಂತರಂಗ ಮತ್ತು ಬಹಿರಂಗ ಶುದ್ಧಿಯಾಗತೊಡಗಿತು, ಭೂಮಿಯ ಬಗ್ಗೆ ತಿಳಿದುಕೊಳ್ಳುತ್ತಾ ಹೋದಹಾಗೆ, ಭೂಮಿ ನಮ್ಮನ್ನು ತನ್ನ ಮಕ್ಕಳಂತೆ ನೋಡಿಕೊಳ್ಳುತ್ತಿರುವ ಅರಿವು ಉಂಟಾಗಿ ನನ್ನಲ್ಲಿ ಸ್ಥಿರತೆ ಮತ್ತು ಆನಂದದ ಅನುಭವವು ಹೆಚ್ಚಾಗತೊಡಗಿತು. ಈ ಪರಿವರ್ತನೆ ಎಲ್ಲರಲ್ಲಿಯೂ ಆಗಲಿ ಎಂದು ಬಯಸುತ್ತೇನೆ. ಸಾಕ್ಷಿ ಟ್ರಸ್ಟ್ ಮೂಲಕ ಪ್ರಕಟಗೊಂಡ ಪುಸ್ತಕಗಳಲ್ಲಿನ ಈ ಮಂತ್ರಗಳನ್ನು ಅನುವಾದಿಸಿದ ವಿದ್ವಾಂಸರಿಗೆ ಮತ್ತು ಭೂಮಿ ಸೂಕ್ತದ ಪರಿಸರ ಪ್ರಜ್ಞೆ ಕಾರ್ಯಕ್ರಮದಲ್ಲಿ ಭಾಗಿಯಾಗುವವರಿಗೆ ನಾನು ಕೃತಜ್ಞನಾಗಿದ್ದೇನೆ, ಅವರ ಕುಟುಂಬದವರಿಗೆ ದೇವತೆಗಳು ಆಯುರಾರೋಗ್ಯ, ಐಶ್ವರ್ಯ, ದೈವೀ ಪ್ರಜ್ಞೆ ಎಲ್ಲವನ್ನು ಅನುಗ್ರಹಿಸಿ ಅವರೊಂದಿಗೆ ಸದಾ ಇರಲಿ ಎಂದು ಪ್ರಾರ್ಥಿಸುತ್ತೇನೆ.

– ಎಂ.ಎ. ಪ್ರಕಾಶ್

## ಮುನ್ನುಡಿ

ಭೂಮಿಯು ತನ್ನ ಶಕ್ತಿಯನ್ನು ತಾನೆ ಉತ್ಪಾದಿಸಿಕೊಳ್ಳುತ್ತಾ ಸೂರ್ಯನ ಸುತ್ತಲೂ ಒಂದು ನಿರ್ಧಿಷ್ಟ ಪಥದಲ್ಲಿ ಸುತ್ತುತಾ ಸೂರ್ಯ ಮಂಡಲದಲ್ಲಿ ಆಶ್ರಯ ಪಡೆದು ನಮಗೂ ಆಶ್ರಯನೀಡಿದೆ. ಜ್ಞಾನಿಗಳು–ಅಜ್ಞಾನಿಗಳು ಸಜ್ಜನರು–ದುರ್ಜನರು ಸಕಲ ಜೀವರಾಶಿಗಳು, ಎಲ್ಲಾವರ್ಗದವರ ಜೊತೆಗೆ, ಬೆಟ್ಟ–ಗುಡ್ಡಗಳು, ನದಿ–ಸಮುದ್ರ, ಗಾಳಿ–ಬೆಳಕು ಎಲ್ಲವೂ ಭೂಮಿಯ ಮೇಲೆ ಆಶ್ರಯ ಪಡೆದು, ತಮಗೆ ಬೇಕಾದ ಶಕ್ತಿಯನ್ನು ಉತ್ಪಾದಿಸಿಕೊಂಡು, ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಬಯಸುತ್ತವೆ. ಇದು ಬ್ರಹ್ಮಾಂಡದ ಒಂದು ನಿಯಮ ಎನ್ನಬಹುದು. ಭೂಮಿಯು ಬ್ರಹ್ಮಾಂಡದಲ್ಲಿ ಒಂದು ಅಂಶ, ಅದರಲ್ಲಿ ನಾವು ಜನಿಸಿರುವುದರಿಂದ ಈ ಅಂಶವು ನಮ್ಮಲ್ಲಿ ಇರುತ್ತದೆ. ಆದರೆ ದೇಹದ ಮೋಹ, ವ್ಯಾಮೋಹಗಳಿಂದ ಸುಪ್ತವಾಗಿರುತ್ತದೆ. ಈ ಅಂಶವನ್ನು ಸಕ್ರಿಯಗೊಳಿಸಲು 63 ಮಂತ್ರಗಳಿರುವ ಅಥರ್ವ ವೇದದ 12ನೇ ಕಾಂಡ 1ನೇ ಸೂಕ್ತ ಹಾಗು ಯಜುರ್ವೇದ ತೈತ್ತಿರೀಯ ಸಂಹಿತೆ 1ನೇ ಕಾಂಡ 5ನೇ ಪ್ರಪಾಠಕ 3ನೇ ಅನುವಾಕಗಳ ಅರ್ಥವನ್ನು ತಿಳಿದು ಬ್ರಹ್ಮಯಜ್ಞವನ್ನು ಮಾಡುವುದರ ಮೂಲಕ ಲಭಿಸುವ ದೈವೀಜ್ಞಾನದಿಂದ ಬ್ರಹ್ಮಾಂಡದ ಅಂಶದ ಜೊತೆ ಸಂಪರ್ಕ ಸಾಧಿಸಿ ಒಳ್ಳೆಯ ಆಲೋಚನೆಗಳನ್ನು ಸೃಷ್ಟಿಸಿ ಬೆಳೆಸಿಕೊಂಡು ಪರಿಸರದ ಜೊತೆ ಜವಾಬ್ದಾರಿಯುತ ಜೀವನವನ್ನು ನಡೆಸಲು ಸಾಧ್ಯ. ಇದು ಸತ್ಯ. ಇದು ನನ್ನ ಅನುಭವ ಕೂಡ. ಇದರ ಬಗ್ಗೆ ಅರಿವನ್ನು ಮೂಡಿಸಲು, ಅಂತಾರಾಷ್ಟ್ರೀಯ ಭೂಮಿಯ ದಿನಾಚರಣೆ ಮತ್ತು ವಿಶ್ವ ಪರಿಸರ ದಿನಾಚರಣೆಯ ಅವಧಿಯಲ್ಲಿ ಪ್ರಪಂಚದಾದ್ಯಂತ ಎಲ್ಲರೂ ಭೂಮಿ ಸೂಕ್ತವನ್ನು ಪಠಿಸಿ ಭೂಮಾತೆಯ ಆಶೀರ್ವಾದವನ್ನು ಪಡೆದು ಮುಂದಿನ ಪೀಳಿಗೆಗೆ ಒಳ್ಳೆಯ ಆರೋಗ್ಯಕರ ವಾತಾವರಣವನ್ನು ನಿರ್ಮಿಸಲಿ ಎಂಬ ಈ ನನ್ನ ಪ್ರಯತ್ನವು ಎಲ್ಲರ ಪ್ರಯತ್ನವಾಗಲಿ. ಎಲ್ಲಾ ಮಂತ್ರಗಳನ್ನು ಪಠಣಮಾಡಿ, ಆಗದಿದ್ದಲ್ಲಿ ಸುಲಭವಾಗಿರುವ ಮಂತ್ರಗಳನ್ನು ಪಠಿಸಲಾರಂಭಿಸಿ ಅಥವಾ ಯಾವುದಾದರು ಒಂದು ಮಂತ್ರವನ್ನು ಪ್ರತಿದಿನ ಪಠಿಸು ವುದರಿಂದ ಖಂಡಿತವಾಗಿ ಒಳ್ಳೆಯ ಯೋಚನೆಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ.

ಮಂತ್ರಗಳನ್ನು ಪಾದಗಳಾಗಿ (ಭಾಗಗಳಾಗಿ) ವಿಂಗಡಿಸಿ, ಪ್ರತಿಯೊಂದು ಪಾದಕ್ಕೂ ಕ್ರಮಸಂಖ್ಯೆಯನ್ನು ನೀಡಿ ಅದರ ಪ್ರತ್ಯೇಕ ಅರ್ಥವನ್ನು ಕೊಡಲಾಗಿದೆ.

– ಪ್ರಕಾಶಕರು

# ಭೂಮಿ ಸೂಕ್ತ

(ಅಥರ್ವ ವೇದ, 12ನೇ ಕಾಂಡ, 1ನೇ ಸೂಕ್ತ ಹಾಗೂ
ಯಜುರ್ ವೇದ ತೈತ್ತಿರೀಯ ಸಂಹಿತೆ 1ನೇ ಕಾಂಡ 5ನೇ ಪ್ರಪಾಠಕ 3ನೇ ಅನುವಾಕ)

### ಉಪಸಂಹಾರ

ಅಥರ್ವ ವೇದದ ಭೂಮಿ ಸೂಕ್ತದಲ್ಲಿ, ನಮ್ಮ ಮಾತೃ ಭೂಮಿಯ ಜನನ ಮತ್ತು ಆಕೆಯಲ್ಲಿ ಅಡಗಿದ ಸಿರಿ-ಸಂಪದಗಳ ರಹಸ್ಯ; ಸಮುದ್ರ, ನದಿ-ಪ್ರವಾಹಗಳು, ವಿವಿಧ ಬಣ್ಣದ ಭೂಭಾಗಗಳು, ಅವುಗಳಲ್ಲಿ ಬೆಳೆಯುವ ಧಾನ್ಯಸಂಪತ್ತು, ಬೆಟ್ಟ-ಗುಡ್ಡಗಳು, ಹಿಮಾಚ್ಛಾದಿತ ಪರ್ವತ ಶ್ರೇಣಿಗಳು, ಮುಂತಾದ ಮಾತೃ ಭೂಮಿಯ ಹೊರಮೈ ಲಕ್ಷಣಗಳು; ವಿವಿಧ ಬಾಷೆಗಳನ್ನು ಮಾತನಾಡುವ ಮತ್ತು ವಿವಿಧ ವೃತ್ತಿ ಹಾಗು ಪ್ರವೃತ್ತಿಗಳ ಜನರು. 'ವಿವಿಧತೆಯಲ್ಲಿ ಏಕತೆ' ಎಂಬ ಆದರ್ಶ ವ್ಯವಸ್ಥೆಯಲ್ಲಿ ಒಂದೇ ಮನೆಯವರಂತೆ ಇರುವ ವೈಶಿಷ್ಟ್ಯದಿಂದ ಕೂಡಿದ ಜನಜೀವನದ ಚಿತ್ರ; ಭೂಮಿಗೂ ಮತ್ತು ಜನರಿಗೂ ಇರುವ ತಾಯಿ-ಮಕ್ಕಳ ಸಂಬಂಧ; ಮುಂತಾದ ವಿಷಯಗಳು ನಿರೂಪಿಸಲ್ಪಟ್ಟಿವೆ. ಭೂಮಿಯಲ್ಲಿ ಪ್ರಾಚೀನ ಭೌತಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಸ್ವರೂಪಗಳು ಸಾಕಾರಗೊಂಡಿವೆ. ಸತ್ಯ, ಋತ, ದೀಕ್ಷಾ, ತಪಸ್ಸು, ಬ್ರಹ್ಮ ಮತ್ತು ಯಜ್ಞವೆಂಬ ಆರು ಆಧಾರಭೂತವಾದ ಅಂಶಗಳಿಂದ ಕೂಡಿದ, ವಸುದೇವ ಕುಟುಂಬಕಂ ಕಲ್ಪನೆಯೂ ಅದರಲ್ಲಿ ಮೂಡಿಬಂದಿದೆ. ಇದರಿಂದ ಭೂಮಿಯು ಅತ್ಯಂತ ಪ್ರಾಚೀನ ಕಾಲದಿಂದಲೂ ಈಗಿರುವ ರಾಷ್ಟ್ರಗಳಿಗೇ ರಾಷ್ಟ್ರವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಅಥರ್ವ ವೇದ ಸಂಹಿತವನ್ನು ಓದುವುದು, ಶ್ರೀ ಅರೋಬಿಂದೊ ಕಪಾಲಿಶಾಸ್ತ್ರಿ ವೇದಸಂಸ್ಕೃತಿ ಸಂಸ್ಥೆ (ಸಾಕ್ಷಿ) ಪ್ರಕಟಣೆಯನ್ನು ಓದುವುದು.

# ಭೂಮಿ ಸೂಕ್ತ

**(ಅಥರ್ವ ವೇದ, 12ನೇ ಕಾಂಡ, 1ನೇ ಸೂಕ್ತ ಹಾಗೂ**
**ಯಜುರ್ ವೇದ ತೈತ್ತಿರೀಯ ಸಂಹಿತೆ 1ನೇ ಕಾಂಡ 5ನೇ ಪ್ರಪಾಠಕ 3ನೇ ಅನುವಾಕ)**

ಭೂಮಿಯನ್ನು ಎತ್ತಿಹಿಡಿದಿದೆ ವಿಶಾಲ ಪೃಥ್ವಿ ಸಕಲ ಜೀವಿಗಳು ಜ್ಞಾನರಶ್ಮಿ ಪ್ರಾಚೀನ ಕಾರ್ಯನಿರತ ಜನರು ಭೂಮಿಯು ವೈಶ್ವಿಕ ಅಗ್ನಿಯನ್ನು ಧರಿಸಿದೆ ದೇವತೆಗಳು ಚ್ಯುತಿಯಿಲ್ಲದಂತೆ ರಕ್ಷಿಸುತ್ತಾರೆ ಹೃದಯವು ಪರಮವ್ಯೋಮದಲ್ಲಿ ಜಲಧಾರೆಗಳು ಅಶ್ವಿನರು ಮತ್ತು ವಿಷ್ಣು ಇಂದ್ರನಿಂದ ರಕ್ಷಿತವಾದುದು ನಿನ್ನ ಕೇಂದ್ರ ಯಜ್ಞ ಜಾಲವನ್ನು ನೇಯುತ್ತಾರೆ ಶತ್ರುಗಳನ್ನು ನಿವಾರಿಸು ಎರಡು ಮತ್ತು ನಾಲ್ಕು ಪ್ರಜ್ಞಾವಸ್ಥೆಗಳುಳ್ಳವರು ಮಧುಮಯ ವಾಕ್ಕು ಧರ್ಮದಿಂದ ಧೃತವಾದದ್ದು ನಿನ್ನ ಮಹಾವೇಗ ಕಲ್ಲಿನಲ್ಲಿ ಅಗ್ನಿ ಅಗ್ನಿ ಅಂತರಿಕ್ಷದಲ್ಲಿದೆ ನನ್ನನ್ನು ಪ್ರಜ್ವಲಿಸುವಂತೆ ಮಾಡು ಮರ್ತ್ಯರು ಸ್ವಧರ್ಮ (ಸ್ವಧಾ) ಮತ್ತು ಅನ್ನದಿಂದ ಜೀವಿಸುತ್ತಾರೆ (ಸು)ಗಂಧ ಕಮಲ ತೇಜಸ್ಸು ಅವಳ ವಕ್ಷದಲ್ಲಿರುವ ಆನಂದ (ಹಿರಣ್ಯ) ಸರ್ವಾಧಾರಿಣಿ ನಾವು ಎಂದೂ ತತ್ತರಿಸದಿರಲಿ ಶುದ್ಧಿಕಾರಿ ಆನಂದರಹಿತ (ಅಪ್ರಿಯ) ವಸ್ತುಗಳನ್ನು ದೂರ ಚೆಲ್ಲು ನಾನೆಂದೂ ಮುಗ್ಗರಿಸದಿರಲಿ ಸರ್ವತ್ರ ಸುರಕ್ಷೆ ಹುಸಿಯಾಗುವ ದೃಷ್ಟಿ ಎಲ್ಲರಿಗೂ ವಿಶ್ರಾಂತಿ ನೀಡು ಅಗೆತದಿಂದ ಭೂಮಿ ಪುನಶ್ಚೇತನಗೊಳ್ಳುತ್ತದೆ ಋತುಗಳು ಸರ್ಪ ಮತ್ತು ದಸ್ಯು ಋಕ್, ಸಾಮ ಮತ್ತು ಯಜುರ್ಮಂತ್ರಗಳು ಭೂತ ಕೃತ ಋಷಿಗಳು (ಲೋಕ ರಚನೆ ಮಾಡುವ) ಭಗ ಮತ್ತು ಇಂದ್ರ ಸಹಾಯ ಮಾಡುತ್ತಾರೆ ಗಾಯನ ಮತ್ತು ನೃತ್ಯ ಮಳೆ ಮತ್ತು ಆಹಾರ ಧಾನ್ಯಗಳು ದೇವಕೃತ ಪುರಗಳು ಗುಪ್ತ ನಿಧಿ ವಿವಿಧ ಭಾಷೆಗಳು ಮತ್ತು ಧರ್ಮಗಳು ಸರ್ಪಗಳೂ ಉಪಕಾರಿಗಳು ರಥದ ಮಾರ್ಗಗಳು ಒಳಿತು–ಕೆಡಕುಗಳನ್ನು ಸಹಿಸಿಕೊಳ್ಳುತ್ತಾಳೆ ವನ್ಯ ಪ್ರಾಣಿಗಳು ಅಭೌತಿಕ ಸತ್ತೆಗಳು ಪಕ್ಷಿಗಳು ಪ್ರಿಯ (ಆನಂದದಾಯಕ) ನಿವಾಸಗಳು ಅಗ್ನಿ, ಸೂರ್ಯ ಮತ್ತು ಜಲ ವಿಜಯ ನಾಲ್ಕು ಪ್ರದೇಶಗಳು (ಅವುಗಳ ಸೃಷ್ಟಿ) ಭೂಮಿಯು ಎಲ್ಲೆಡೆ ಶ್ಲಾಘಿಸಲ್ಪಟ್ಟದ್ದು ವಲಸೆ ಮಧುರ ಮಾತನ್ನಾಡುತ್ತೇನೆ ಪೃಥ್ವಿಯು ಪೋಷಣೆ ಕೊಡುತ್ತದೆ ಅದಿತಿ ನಮ್ಮ ಬಲಿ ನನ್ನನ್ನು ಸುರಕ್ಷಿತವಾಗಿರಿಸು

**P T O made by Google AI considering the above words :**

# ಭೂಮಿ ಸೂಕ್ತ

**(ಅಥರ್ವ ವೇದ, 12ನೇ ಕಾಂಡ, 1ನೇ ಸೂಕ್ತ ಹಾಗೂ
ಯಜುರ್ ವೇದ ತೈತ್ತಿರೀಯ ಸಂಹಿತೆ 1ನೇ ಕಾಂಡ 5ನೇ ಪ್ರಪಾಠಕ 3ನೇ ಅನುವಾಕ)**

**1. ವೈದಿಕ ದೇವತೆಗಳು ಮತ್ತು ಭೂಮಿಯ ರಕ್ಷಣೆ**

ವಿಶಾಲವಾದ ಪೃಥ್ವಿಯು ಸಕಲ ಜೀವಿಗಳನ್ನು ತನ್ನ ಮಡಿಲಲ್ಲಿ ಎತ್ತಿಹಿಡಿದಿದೆ. ಈ ಭೂಮಿಯು ಸನಾತನ ಧರ್ಮದಿಂದ ಧೃತವಾದದ್ದು ಹಾಗೂ **ಅಶ್ವಿನರು**, **ವಿಷ್ಣು** ಮತ್ತು **ಇಂದ್ರನಿಂದ** ವಿಶೇಷವಾಗಿ ರಕ್ಷಿತವಾದುದು. ಲೋಕಪಾಲಕರಾದ **ಭಗ** ಮತ್ತು ಇಂದ್ರರು ಸದಾ ಮಾನವರಿಗೆ ಸಹಾಯ ಮಾಡುತ್ತಾರೆ. ಜಗತ್ತಿನ ಸೃಷ್ಟಿಕರ್ತೆಯಾದ **ಅದಿತಿ** ನಮ್ಮ ಬಲಿಯನ್ನ ಸ್ವೀಕರಿಸಿ ಸದಾ ಸುರಕ್ಷಿತವಾಗಿರಿಸುತ್ತಾಳೆ. ದೇವತೆಗಳು ಈ ಧರೆಯನ್ನು ಯಾವುದೇ ಚ್ಯುತಿಯಿಲ್ಲದಂತೆ ರಕ್ಷಿಸುತ್ತಾರೆ. ಇದರ ಕೇಂದ್ರದಲ್ಲಿ ಯಜ್ಞ ಜಾಲವನ್ನು ನೇಯುವ ಪ್ರಾಚೀನ ಕಾರ್ಯನಿರತ ಜನರಿದ್ದಾರೆ.

**2. ಅಗ್ನಿ, ಸೂರ್ಯ ಮತ್ತು ಜಲದ ಪ್ರಭಾವ**

ಭೂಮಿಯು ವೈಶ್ವಿಕ **ಅಗ್ನಿಯನ್ನು** ತನ್ನ ಒಡಲಲ್ಲಿ ಧರಿಸಿದೆ; ಈ ಅಗ್ನಿಯು ಕಲ್ಲಿನಲ್ಲಿದೆ ಮತ್ತು ಅಂತರಿಕ್ಷದಲ್ಲೂ ವ್ಯಾಪಿಸಿದೆ. ಜಗತ್ತಿಗೆ ಬೆಳಕನ್ನು ನೀಡುವ **ಸೂರ್ಯ**, ಸರ್ವರನ್ನು ಪಾವನಗೊಳಿಸುವ **ಅಗ್ನಿ** ಮತ್ತು ತಂಪನ್ನು ನೀಡುವ **ಜಲ** (ನೀರು) ಈ ಭೂಮಿಯ ಶಕ್ತಿಗಳಾಗಿವೆ. ಆ ದೈವೀ ಶಕ್ತಿಯು ನನ್ನನ್ನು ಸದಾ ಪ್ರಜ್ವಲಿಸುವಂತೆ ಮಾಡಲಿ ಮತ್ತು ನಮ್ಮ ಶತ್ರುಗಳನ್ನು ನಿವಾರಿಸಲಿ.

**3. ಪ್ರಕೃತಿ, ಜೀವಿಗಳು ಮತ್ತು ಸಹಿಷ್ಣುತೆ**

ಭೂಮಿಯ ಮೇಲೆ ಎರಡು ಮತ್ತು ನಾಲ್ಕು ಕಾಲುಗಳ ಪ್ರಜ್ಞಾವಸ್ಥೆಗಳುಳ್ಳ ಜೀವಿಗಳು, ವನ್ಯ ಪ್ರಾಣಿಗಳು ಹಾಗೂ ಪಕ್ಷಿಗಳು ಒಟ್ಟಾಗಿ ಬಾಳುತ್ತಿವೆ. ಇಲ್ಲಿ ಹರಿಯುವ **ಜಲಧಾರೆಗಳು**, ಮಳೆ ಮತ್ತು ಆಹಾರ ಧಾನ್ಯಗಳು ಎಲ್ಲರಿಗೂ ಪೋಷಣೆ ಕೊಡುತ್ತವೆ. ಪ್ರಕೃತಿಯ ಋತುಗಳು ಚಕ್ರದಂತೆ ಸುಳಿಯುತ್ತಾ, ಅಗೆತದಿಂದ ಭೂಮಿ ಪುನಶ್ಚೇತನಗೊಳ್ಳುವಂತೆ ಮಾಡುತ್ತವೆ. ಹಾವಿನಂತಹ ಸರ್ಪಗಳೂ ಇಲ್ಲಿ ಉಪಕಾರಿಗಳಾಗಿದ್ದು, ಭೂಮಿಯು ಒಳಿತು–ಕೆಡಕುಗಳನ್ನು ಸಮಾನವಾಗಿ ಸಹಿಸಿಕೊಳ್ಳುತ್ತಾಳೆ. ಈ ವಿಶಾಲ ಧರೆಯು ಎಲ್ಲರಿಗೂ ವಿಶ್ರಾಂತಿ ನೀಡುವ ಪ್ರಿಯ ಹಾಗೂ ಆನಂದದಾಯಕ ನಿವಾಸವಾಗಿದೆ.

**4. ಮಾನವ ಜೀವನ, ಸಂಸ್ಕೃತಿ ಮತ್ತು ಸೌಹಾರ್ದತೆ**

ಮರ್ತ್ಯರಾದ ಮಾನವರು ಸ್ವಧರ್ಮ ಮತ್ತು ಅನ್ನದಿಂದ ಜೀವಿಸುತ್ತಾರೆ. ಇಲ್ಲಿನ ಜನರು ವಿವಿಧ ಭಾಷೆಗಳು ಮತ್ತು ಧರ್ಮಗಳನ್ನು ಅನುಸರಿಸುತ್ತಾ ರಥದ ಮಾರ್ಗಗಳಲ್ಲಿ ವಲಸೆ ಹೋಗುತ್ತಾರೆ. ಭೂತ ಮತ್ತು ಕೃತ ಕಾಲದ ಋಷಿಗಳು ಹಾಗೂ ಜ್ಞಾನರಶ್ಮಿಯನ್ನು ಹೊಂದಿದ ಜ್ಞಾನಿಗಳು ಈ ಲೋಕ ರಚನೆಗೆ ಕಾರಣರಾಗಿದ್ದಾರೆ. ಮಾನವ ಜೀವನದಲ್ಲಿ ಗಾಯನ ಮತ್ತು ನೃತ್ಯಗಳು ಸಂಭ್ರಮವನ್ನು ತಂದರೆ, ಮಧುಮಯ ವಾಕ್ಕು ಮತ್ತು ಮಧುರ ಮಾತುಗಳು ಸೌಹಾರ್ದತೆಯನ್ನು ಬೆಳೆಸುತ್ತವೆ.

**5. ಪ್ರಾರ್ಥನೆ ಮತ್ತು ಮಂಗಲ ಆಶಯಗಳು**

ಸರ್ವಾಧಾರಿಣಿಯಾದ ಭೂದೇವಿಯ ವಕ್ಷದಲ್ಲಿ (ಹೃದಯದಲ್ಲಿ) ಸುಗಂಧ, ಕಮಲ, ತೇಜಸ್ಸು ಹಾಗೂ ಹಿರಣ್ಯದಂತಹ ಆನಂದ ಅಡಗಿದೆ. ಅವಳ ಹೃದಯವು ಪರಮವ್ಯೋಮದಲ್ಲಿದೆ. ದೇವಕೃತ ಪುರಗಳು ಮತ್ತು ಗುಪ್ತ ನಿಧಿಗಳನ್ನು ಹೊಂದಿರುವ ಈ ಭೂಮಿಯು ಎಲ್ಲೆಡೆ ಶ್ಲಾಘಿಸಲ್ಪಟ್ಟಿದೆ. ಓ ಪ್ರಕೃತಿ ಮಾತೆ, ನಮ್ಮ ಜೀವನದಲ್ಲಿ ಆನಂದರಹಿತ (ಅಪ್ರಿಯ) ವಸ್ತುಗಳನ್ನು ದೂರ ಚೆಲ್ಲು. ನಿನ್ನ ಮಹಾವೇಗಕ್ಕೆ ನಾವು ಎಂದೂ ತತ್ತರಿಸದಿರಲಿ, ಜೀವನದ ಹಾದಿಯಲ್ಲಿ ನಾನೆಂದೂ ಮುಗ್ಗರಿಸದಿರಲಿ. ಹುಸಿಯಾಗುವ ದೃಷ್ಟಿಯಿಂದ ನಮ್ಮನ್ನು ಕಾಪಾಡಿ, ಸರ್ವತ್ರ ಸುರಕ್ಷೆ ಮತ್ತು ವಿಜಯವನ್ನು ಕರುಣಿಸು.